# ನಾಳಿನ ಸುಗಂಧದ ಲೆಕ್ಕ

ಮುಟ್ಟಿದರೆ ಮುನಿಯ ಇನ್ನೊಂದು ಹೆಸರು
ನಾಚಿಕೆ ಮುಳ್ಳು!
ಅದೀಗ ಎಲ್ಲೂ ಕಾಣುತ್ತಿಲ್ಲ
ಗಿಡಗಳೆಲ್ಲ ಬದಲಾಗಿ ಹೋಗಿವೆ.
ಮಣ್ಣನ್ನು ಬುಡಮೇಲು ಮಾಡಿ
ಹಳೆಯ ಜೀವಿಗಳಿಗೆ ಸಮಾಧಿ ಕಟ್ಟಲಾಗಿದೆ.
ಅದೀಗ ಜೀವಪರತೆಯನ್ನು ಮರೆತಿದೆ
ಹುಡುಕಿದರೂ ಕಾಣುತ್ತಿಲ್ಲ ನಾರು, ಬೇರುಗಳು
ಔಷಧ ಸಸ್ಯಗಳು, ಮನೆ ಮದ್ದುಗಳು
ಕೊನೆಗೆ ನಾಯಿ, ಬೆಕ್ಕುಗಳಿಗೂ...

ಅದಕಾಗಿ
ಮಣ್ಣ ಮಡಿಕೆ ಜೀವ ತೆಗೆದಿದೆ!

ಎಲ್ಲೋ ಇದ್ದ ಮಣ್ಣು
ಯಾರೋ ತಂದು, ಒದ್ದು, ಗುದ್ದಿ, ಕೊಟ್ಟ ಆಕಾರ
ಯಾರೋ ಕಲಿಸಿದ ಕೈಚಳಕ
ಒಣಗಿಸಿದವರ್‍ಯಾರೋ,
ಒಯ್ದವರ್‍ಯಾರೋ
ತಂದವರ್‍ಯಾರೋ
ಎಷ್ಟು ಜನರ ಕೈ ಬದಲಾಯಿಸಿರಬಹುದು
ಕೊಟ್ಟ ದುಡ್ಡು!

ಮುಟ್ಟಿದ ಮುಗ್ಧತೆಗೆ ಮಾತ್ರ ಶಿಕ್ಷೆ!!

ಪಾಪ...
ಶಾಲೆಯಲ್ಲಿ ಕಲಿಸಿದ್ದರು
ನೀರಿಗೆ ಬಣ್ಣ, ಆಕಾರ, ಗುಣವಿಲ್ಲ
ಎಲ್ಲ ಆಳತೆಗೂ ಹೊಂದಬಲ್ಲದು
ಇಳಿಯುವುದು ಅದರ ಸ್ವಭಾವ ಎಂದು

ನಂಬಿದ ಮುಗ್ಧತೆ
ಮುಟ್ಟಿದ ನೀರ
ಕುಲಗೆಡಿಸಿತ್ತು ಸಮಾಜ.
ಪುಸ್ತಕದಲ್ಲಿರುವ ಸತ್ಯ ಹೇಳಿಬಿಡಬಹುದಿತ್ತು
ಶಾಲೆಯೋ, ಸಮಾಜವೋ
ಆ ಮುಗ್ಧತೆಗೆ.

ಹೆಚ್ಚೆಂದರೆ
ಮನಸು ಮುರುಟುತಿತ್ತು
ಹೂವು ಕಮರುತ್ತಿರಲಿಲ್ಲ
ನಾಳಿನ ಸುಗಂಧದ ಲೆಕ್ಕ
ಹಾಜರಿ ಪುಸ್ತಕದ ತುದಿಯಲ್ಲಿ ಸೇರುತ್ತಿರಲಿಲ್ಲ.



**ನೂತನ ದೋಶೆಟ್ಟಿ**

ಕಲೆ: ಡಿ.ಕೆ. ರಮೇಶ್

